ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 23/2019 ಸಿಡಬ್ಲ್ಯೂ : 1 ಪಿ ಡಬ್ಲ್ಯೂ : 1

| | |
|---|---|
| ಹೆಸರು | ಪ್ರಮೋದ್ |
| ತಂದೆಯ ಹೆಸರು | ಜಯರಾಮು |
| ವಯಸ್ಸು | 31 ವರ್ಷ |
| ವೃತ್ತಿ | ಗಾರೆ ಕೆಲಸ |
| ವಾಸ | ಕೂಡಲಕುಪ್ಪೆ |

ದಿನಾಂಕಃ 29.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 2 ನನ್ನ ತಾಯಿ. ಚಾಸಾ 3 ನನ್ನ ದೊಡ್ಡಪ್ಪ. ಚಾಸಾ 4, 10, 11, 19 ರವರ ಪರಿಚಯವಿದೆ. ಚಾಸಾ 5 ರಿಂದ 9, 12 ರಿಂದ 14 ಮತ್ತು 17 ರಿಂದ 19, 21 ರಿಂದ 23 ರವರ ಪರಿಚಯವಿಲ್ಲ. ಚಾಸಾ 15 ನನ್ನ ತಮ್ಮ, ಚಾಸಾ 16 ನನ್ನ ಸಂಬಂಧಿಕರು. ಚಾಸಾ 20 ಮೃತ ರಾಜು ಅವರ ಪತ್ನಿಯಾಗಿದ್ದು, ಆಕೆ ಈಗ ಮರಣ ಹೊಂದಿರುತ್ತಾಳೆ. ಜಯರಾಮು ನನ್ನ ತಂದೆ ಮತ್ತು ರಾಜು ನನ್ನ ಮಾವ. ಅವರಿಬ್ಬರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. 2018 ರಲ್ಲಿ ನನ್ನ ತಂದೆ ಜಯರಾಮು ಮತ್ತು ನನ್ನ ಮಾವ ರಾಜು ಕೂಡಲಕುಪ್ಪೆಯಿಂದ ಕೆಂಪಯ್ಯನಹುಂಡಿಗೆ ಟಿ ವಿ ಎಸ್ ಎಕ್ಸೆಲ್ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದರು. ಸದರಿ ವಾಹನವನ್ನು ನನ್ನ ಮಾವ ರಾಜು ಸವಾರಿ ಮಾಡುತ್ತಿದ್ದರು. ನನ್ನ ತಂದೆ ಹಿಂಬದಿಯಲ್ಲಿ ಕುಳಿತಿದ್ದರು. ನಾನು ಮತ್ತು ನನ್ನ ತಾಯಿ ಸ್ಲೆಂಡರ್ ದ್ವಿ ಚಕ್ರ ವಾಹನ ದಲ್ಲಿ ಅವರ ಹಿಂದೆ ಬರುತ್ತಿದ್ದೆವು. ಆಗ ಬನ್ನೂರು ಕಡೆಯಿಂದ ಒಬ್ಬ ಕಾರ್ ಚಾಲಕ ತನ್ನ ಕಾರನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು

ಶ್ರೀರಂಗಪಟ್ಟಣ ಬನ್ನೂರು ಮುಖ್ಯ ರಸ್ತೆಯ ಚಿನ್ನಾಯಕನಹಳ್ಳಿ ಭೀಮ್ ರಾವ್ ಅವರ ಮನೆಯ ಹತ್ತಿರ ನನ್ನ ಮಾವ ಓಡಿಸುತ್ತಿದ್ದ ಮೋಟಾರ್ ಸೈಕಲ್ ಡಿಕ್ಕಿ ಮಾಡಿರುತ್ತಾರೆ. ಆಗ ನನ್ನ ತಂದೆ ಮತ್ತು ನನ್ನ ಮಾವ ಬೈಕ್ ಸಮೇತ ಕೆಳಗೆ ಬಿದ್ದು, ಇಬ್ಬರಿಗೂ ಪ್ರಜ್ಞೆ ಇರಲಿಲ್ಲ. ಆಂಬುಲೆನ್ಸ್ ನಲ್ಲಿ ನನ್ನ ತಂದೆ ಮತ್ತು ಮಾವನನ್ನು ನನ್ನೊಂದಿಗೆ ನಮ್ಮ ಊರಿನವರಾದ ಸಂಬಯ್ಯ, ಜಗದೀಶ್ ಮತ್ತು ಗೌತಮ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನನ್ನ ತಂದೆ ಮೃತ ಪಟ್ಟಿರುವುದಾಗಿ ನಮಗೆ ಆಸ್ಪತ್ರೆಯಲ್ಲಿ ತಿಳಿದು ಬಂತು. ರಾಜು ಅವರು ಸ್ವಲ್ಪ ಉಸಿರಾಡುತ್ತಿದ್ದು, ಅವರನ್ನು ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸೂಚಿಸಿರುತ್ತಾರೆ. ಅವರನ್ನು ಆಂಬುಲೆನ್ಸ್ ನಲ್ಲಿ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾಗ ಮಾರ್ಗ ಮಧ್ಯದಲ್ಲಿ ಅವರು ಮರಣ ಹೊಂದಿರುತ್ತಾರೆ. ನನ್ನ ತಂದೆಗೆ ಅಪಘಾತದಲ್ಲಿ ತಲೆ, ಕಪಾಳ ಮತ್ತು ಮಂಡಿ ಭಾಗಕ್ಕೆ ಗಾಯವಾಗಿ ರಕ್ತ ಬರುತ್ತಿತ್ತು. ರಾಜು ಅವರ ತಲೆ ಓಪನ್ ಆಗಿದ್ದು, ಎದೆಯ ಭಾಗ ಸಂಪೂರ್ಣ ಜಜ್ಜಿ ಹೋಗಿತ್ತು. ನಾನು ಅಪಘಾತದ ಪಡಿಸಿದ ಕಾರ್ ಚಾಲಕ ಹಾಗೂ ಕಾರ್ ಸಂಖ್ಯೆಯನ್ನು ನೋಡಿರುವುದಿಲ್ಲ. ಅದೇ ದಿನ ನಾನು ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ತಮ್ಮ ದೂರನ್ನು ನೋಡಿ, ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ದೂರನ್ನು ನಿಪಿ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಫೋಟೋಗಳನ್ನು ನೋಡಿ ಅದರಲ್ಲಿರುವುದು ತನ್ನ ತಂದೆ ಹಾಗೂ ಮೃತ ರಾಜು ಎಂದು ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು 65(ಬಿ) ಪ್ರಮಾಣ ಪತ್ರ ಇಲ್ಲದ ಕಾರಣ ಗುರುತಿಸಲು ಆರೋಪಿ ಪರ ವಕೀಲರು ಆಕ್ಷೇಪಿಸಿದ್ದು, ಅದನ್ನು ಆಕ್ಷೇಪಣೆಗೆ ಒಳಪಟ್ಟು ನಿಪಿ 2 ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಅಪಘಾತಪಡಿಸಿದ ಕಾರಿನ

ಫೋಟೋವನ್ನು ತೋರಿಸಲಾಗಿ ಅವರು ಅದನ್ನು ಗುರುತಿಸಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿರುವುದಿಲ್ಲ.

<u>ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>

<u>ಪಾಟೀ ಸವಾಲು ಃ ಎ ಪಿ ಪಿ ರವರಿಂದಃ</u>

2. ಅಪಘಾತವು ದಿಃ 19.10.2018 ರಂದು ಮಧ್ಯಾಹ್ನ 3.30 ಕ್ಕೆ ಆಗಿರುತ್ತದೆ ಎಂದರೆ ಸರಿ. ಆ ದಿನ ರಾಜು ಅವರು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನದ ಸಂಖ್ಯೆಃ ಕೆಎ-55-ಇ-8674 ಎಂದರೆ ನನಗೆ ಗೊತ್ತಿಲ್ಲ. ಆ ದಿನ ಕಾರ್ ಚಾಲಕ ಎದುರುನಿಂದ ಅತಿವೇಗ ಹಾಗೂ ಅಜಾಗರೂಕತೆಯಿಂದ ಅಡ್ಡಾದಿಡ್ಡಿಯಾಗಿ ಬಂದು ರಾಜು ಅವರು ಓಡಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿ. ಅಪಘಾತವಾದ ತಕ್ಷಣ ನಾನು, ಚಾಸಾ2 ರಿಂದ 4 ರವರು ಬಂದು ನನ್ನ ತಂದೆ ಹಾಗೂ ರಾಜು ಅವರನ್ನು ಉಪಚರಿಸಿರುತ್ತೇವೆ ಎಂದರೆ ಸರಿ. ಅಪಘಾತಪಡಿಸಿದ ಕಾರ್ ನ ನೋಂದಣಿ ಸಂಖ್ಯೆಃ ಕೆಎ-05-ಎಂಎನ್-5574 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 18.12.2018 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದು, ನನ್ನ ಸಮಕ್ಷಮ ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು ರಾಘವೇಂದ್ರ ಬಿನ್ ಶಿವರಾಮು, ವಾಸಃ ಹೊನ್ನೇನಹಳ್ಳಿ ಗ್ರಾಮ, ಮುರುಕನಹಳ್ಳಿ ಪೋಸ್ಟ್, ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ದ್ವಿ ಚಕ್ರ ವಾಹನವನ್ನು ಠಾಣಾ ಆವರಣದಲ್ಲಿ ನಿಲ್ಲಿಸಿದ್ದು, ಅದರ ನೋಂದಣಿ ಸಂಖ್ಯೆಃ ಕೆಎ-05-ಎಂಎನ್-5574 ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯು ಆ ದಿನ ಅಪಘಾತಪಡಿಸಿರುತ್ತಾನೆ ಎಂದರೆ ಸಾಕ್ಷಿ ನಾನು ಆತನನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಪ್ಪಿನಿಂದ ಅಪಘಾತವಾಗಿದ್ದು, ನಾನು ಆತನನ್ನು

ನೋಡಿದ್ದರೂ ಸಹ ಆತನಿಗೆ ಅನುಕೂಲವಾಗಲೀ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿಃ 19.10.2018 ರಂದು …......... ಮತ್ತೆ ನೋಡಿದರೆ ಗುರುತಿಸುತ್ತೇನೆ. ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 6 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು ಃ ಆರೋಪಿ ಪರ ಃ ಶ್ರೀ ಎಸ್ ಪಿ ವಕೀಲರಿಂದಃ</u>

ಅಪಘಾತವಾದ ಸ್ಥಳದಲ್ಲಿ ತೀವ್ರ ತಿರುವು ಇದೆ ಎಂದರೆ ಸರಿ. ಎದುರುಗಡೆಯಿಂದ ಬರುವ ವಾಹನ ತಿರುವು ಇರುವ ಕಾರಣ ಕಾಣಿಸುವುದಿಲ್ಲ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಒಂದು ದೊಡ್ಡ ಹಂಪ್ ಇರುತ್ತದೆ ಎಂದರೆ ಸರಿ. ಹಂಪ್ ಇರುವ ಕಾರಣ ವಾಹನಗಳು ನಿಧಾನವಾಗಿ ಬಂದು, ನಿಧಾನವಾಗಿ ಹೋಗಬೇಕು ಎಂದರೆ ಸರಿ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನಾನು ಅಪಘಾತವಾದ ನಂತರ ಅಲ್ಲಿ ಜನ ಸೇರಿದ್ದು, ತದನಂತರ ನಾನು ಹೋಗಿರುತ್ತೇನೆ. ನಾನು ದೂರನ್ನು ಸ್ಥಳೀಕರು ಹೇಳಿದ ಮಾಹಿತಿಯ ಮೇರೆಗೆ ನೀಡಿದ್ದು, ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ರಾಜು ಅವರು ಸವಾರಿ ಮಡುತ್ತಿದ್ದ ಬೈಕ್ ಗೆ ಯಾವ ವಾಹನ ಡಿಕ್ಕಿ ಪಡಿಸಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಡಿಕ್ಕಿ ಪಡಿಸಲಾಗಿದೆ ಎಂದು ಹೇಳುವ ಕಾರಿನ ಚಾಲಕನನ್ನು ನಾನು ನೋಡಿರುವುದಿಲ್ಲ. ಅಪಘಾತವು ಕಾರ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರಕ್ಕೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಒಂದು ಕೇಸ್ ಸಲ್ಲಿಸಿದ್ದೇನೆ ಎಂದರೆ ಸರಿ. ಪರಿಹಾರ ಸಿಗಲಿ ಎಂಬ ದುರುದ್ದೇಶದಿಂದ ನಾನು ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಅನುಮತಿಯ ಮೇರೆಗೆ ಃ ಎ ಪಿ ಪಿ ರವರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಅಪಘಾತವು ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ತಿಳಿಸಿದ್ದು, ಆರೋಪಿಯ ಪರ ವಕೀಲರು ಪಾಟೀ ಸವಾಲು ಮಾಡಿದಾಗ ನಾನು ಅಪಘಾತವು ಕಾರ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಅನುಕೂಲವಾಗಲಿ ಎಂಬ ದುರುದ್ದೇಶದಿಂದ ನಾನು ಮುಖ್ಯ ವಿಚಾರಣೆಯಲ್ಲಿ ಬೇರೆ ರೀತಿ ಸಾಕ್ಷ್ಯ ಹೇಳಿ ಪಾಟೀ ಸವಾಲಿನಲ್ಲಿ ಬೇರೆ ರೀತಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.

-